ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ.,
ನ್ಯಾಯಾಲಯ,ಹೊಸದುರ್ಗ.

ಅಸಲು ದಾವಾ ಸಂಖ್ಯೆ **83/2020** ದಿನಾಂಕಃ **10.11.2025**

ಪಿ.ಡಬ್ಲ್ಯೂಃ **1**

**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ 6 ನೇ ಪ್ರತಿವಾದಿಯ ಪರ ಶ್ರೀ ಎಸ್ ಎಂ ವಕೀಲರಿಂದ**

1. ನನ್ನ ತಂದೆ 1 ನೇ ಪ್ರತಿವಾದಿಯ ತಂದೆ 1993 ರಲ್ಲಿ ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ದಾವೆಯನ್ನು ಸರ್ವೇ ನಂಬರ್ 48 ರ ಜಮೀನು ಮತ್ತು ಅದರ ಪಕ್ಕದ ನಿವೇಶನಕ್ಕೆ ಸಂಬಂಧಿಸಿದಂತೆ ದಾಖಲಿಸಿರುತ್ತೇನೆ. ಸದರಿ ನಿವೇಶನ ಅಂದರೆ 5 ನೇ ದಾವಾ ಆಸ್ತಿ 1 ನೇ ಪ್ರತಿವಾದಿಯ ತಂದೆಗೆ ವಿಭಾಗದಲ್ಲಿ ಹಿಸ್ಸೆ ಹೋಗಿತ್ತು ಎಂದರೆ ಸರಿ . 1 ನೇ ಪ್ರತಿವಾದಿ ತನ್ನ ಸಹೋದರರೊಂದಿಗೆ ತನ್ನ ತಂದೆಯ ಪಾಲಿಗೆ ಬಂದ ಸ್ವತ್ತುಗಳಲ್ಲ ವಿಭಾಗ ಮಾಡಿಕೊಂಡು ಪ್ರತ್ಯೇಕವಾಗಿ ಸ್ವಾಧೀನಾನುಭವದಲ್ಲಿ ಇರುತ್ತಾರೆ ಎಂದರೆ ಸರಿ. ಅದೇ ರೀತಿ ದಾವಾ 5 ನೇ ಸ್ವತ್ತಿನಲೂ ಸಹ ವಿಭಾಗ ಆಗಿ 1 ನೇ ಪ್ರತಿವಾದಿಯ ತಂದೆಯ ಹೆಸರಿನಲ್ಲಿ ಖಾತೆ ಸಹ ಆಗಿತ್ತು ಎಂದರೆ ಸರಿ . ಸದರಿ 1 ನೇ ಪ್ರತಿವಾದಿ ಪಾಲಿಗೆ ಬಂದ ನಿವೇಶನವನ್ನು 6 ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ ಈ ದಾವೆ ದಾಖಲಿಸಿದ ನಂತರ ಮಾರಾಟ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಂತರ ದಾವಾ 5 ನೇ ಸ್ವತ್ತಿನ ಸ್ವಾಧೀನವನ್ನು 6 ನೇ ಪ್ರತಿವಾದಿಗೆ ಬಿಟ್ಟು ಕೊಟ್ಟಿರುತ್ತಾರೆ. ಸದರಿ ನಿವೇಶನದ ಖಾತೆ 6 ನೇ ಪ್ರತಿವಾದಿ ಹೆಸರಿಗೆ ಬದಲಾವಣೆ ಆಗಿರುತ್ತದೆ ಎಂದರೆ ಸರಿ . 6 ನೇ ಪ್ರತಿವಾದಿಗೆ 1 ರಿಂದ 5 ನೇ ಪ್ರತಿವಾದಿಯರು ತಮ್ಮ ಪಾಲಿಗೆ ಬಂದ ಆಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸಾಕ್ಷಿ 2010 ರಲ್ಲಿ 60 ಸಾವಿರ ರೂಪಾಯಿಗಳನ್ನು ನೀಡಿ ನಮ್ಮಹೆಸರಿಗೆ ಬರೆದುಕೊಡುವಂತೆ ಕೇಳಿಕೊಂಡಿದ್ದರೂ 1 ರಿಂದ 5ನೇ ಪ್ರತಿವಾದಿಯರು ಬರೆದುಕೊಡದ ಕಾರಣ ಈ ದಾವೆ ದಾಖಲಿಸಿರುತ್ತೇನೆ ಎಂದು ನುಡಿಯುತ್ತಾರೆ.

2. ನನಗೆ 60 ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿದ ಬಗ್ಗೆ ಬರವಣಿಗೆಯಲ್ಲಿ ಯಾವುದೇ ದಾಖಲೆ ಆಗಿರುವುದಿಲ್ಲ. 6 ನೇ ಪ್ರತಿವಾದಿಗೆ ತೊಂದರೆ ಕೊಡುವ ಉದ್ದೇಶದಿಂದ ದಾವಾ 5 ನೇ ನಿವೇಶನ ಸ್ವತ್ತನ್ನು ನಾನು ಖರೀಧಿಸಿದ್ದೆ ಎಂದು ಸುಳ್ಳು ಸೃಷ್ಟಿಸಿ ಆತನ ವಿರುದ್ದ ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ . ದಾವಾ 5 ನೇ ನಿವೇಶನ ಸ್ವತ್ತಿನ ಸ್ವಾಧೀನವನ್ನುನಮಗೆ ಸದರಿ ಖರೀದಿ ಮೇರೆಗೆ ಬಿಟ್ಟು ಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ . ದಿಃ 10.02.2010 ರಂದು ದಾವಾ 5 ನೇ ಸ್ವತ್ತಿನ ಸ್ವಾಧೀನವನ್ನು ನನಗೆ ಬಿಟ್ಟು ಕೊಟ್ಟಿರುತ್ತಾರೆ. ಈ ವಿಷಯವನ್ನು ದಾವೆಯಲ್ಲಿ ಬರೆಸಿರುವುದಿಲ್ಲ. ಸ್ವಾಧೀನ ಬಟ್ಟು ಕೊಡದ ಕಾರಣ ಈ ವಿಷಯ ವಾದಪತ್ರದಲ್ಲಿ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ . ಯಾವುದೇ ಸ್ವತ್ತನ್ನು ಕೊಂಡುಕೊಳ್ಳದೇ ಇದ್ದರೂ ಸಹ 6 ನೇ ಪ್ರತಿವಾದಿಯ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ದಾವೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ.

(ಪ್ರಸನ್ನ ಕುಮಾರ್ ಸಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ನ್ಯಾಯಾಲಯ ಹೊಸದುರ್ಗ.